

ಬಡಿದಾಡುತ್ತಿರಬಹುದು. ಆದ್ದರಿಂದ ಪ್ರತಿಯೊಬ್ಬ ವ್ಯಂಗ್ಯಚಿತ್ರಕಾರನೂ ರಾಜಕಾರಣಿಯ ಬಾಹ್ಯರೂಪಕ್ಕೆ ತೀರ ಹತ್ತಿರವಾಗಿರುವ ಅಂಗಾಂಶವೊಂದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ; ಆ ಮೂಲಕ ರಾಜಕಾರಣಿಯ ಅಂತರಂಗದ ಒಂದು ಭಾಗವನ್ನು ಪ್ರಕಾಶಪಡಿಸುತ್ತಾನೆ.

ರಾಜಕೀಯ ವ್ಯಂಗ್ಯಚಿತ್ರವನ್ನು ಕಾಮಿಕ್ ಸ್ಟ್ರಿಪ್ಪಿನ ಹಾಗೆ ನೋಡಬಾರದು. ಕಾಮಿಕ್ ಸ್ಟ್ರಿಪ್ಪಿನಲ್ಲಿ ರೇಖಾಚಿತ್ರ ಹಾಗೂ ಕಲ್ಪಿತ ಸಂದರ್ಭ ಎರಡೂ ಒಟ್ಟುಗೂಡಿ ನೋಡುಗನಿಗೆ ಮುದ ನೀಡುತ್ತವೆ. ರಾಜಕೀಯ ವ್ಯಂಗ್ಯಚಿತ್ರವಾದರೋ, ತಿಳಿಹಾಸ್ಯದ ಧಾಟಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದರ ಜೊತೆಗೆ ನೋಡುಗನಿಗೆ ಒಂದು ರಾಜಕೀಯ ಅಥವಾ ಸಾಮಾಜಿಕ ಬೆಳವಣಿಗೆಯ ಅರಿವು ನೀಡಿ ಅವನ ಗಮನ ಆ ಕಡೆ ಹರಿಯುವಂತೆ ಮಾಡುತ್ತದೆ. ಉದಾಹರಣೆಗೆ, ಒಬ್ಬ ವೈದ್ಯರನ್ನೂ ಒಬ್ಬ ತರುಣ ಹಿಪ್ಪಿಯನ್ನೂ ಚಿತ್ರಿಸುವ ಒಂದು ವ್ಯಂಗ್ಯಚಿತ್ರವನ್ನು ತೆಗೆದುಕೊಳ್ಳೋಣ. ಅದರಲ್ಲಿ ವೈದ್ಯರು ತರುಣ ಹಿಪ್ಪಿಗೆ 'ಧೂಮಪಾನವನ್ನು ಬಿಟ್ಟುಬಿಡು, ನೆನಪಿರಲಿ, ಬಿಟ್ಟುಬಿಡಬೇಕಾದ್ದು ತಂಬಾಕಷ್ಟೇ ಅಲ್ಲ' ಎಂಬ ಸಲಹೆ ಕೊಡುತ್ತಿದ್ದಾರೆ. ಈ ವ್ಯಂಗ್ಯಚಿತ್ರವನ್ನು ನೋಡುವವನಿಗೆ ಇಲ್ಲೊಂದು ಅಸಂಬದ್ಧತೆ ಕಾಣಿಸುತ್ತದೆ. ವೈದ್ಯರ ಮನಸ್ಸಿನಲ್ಲಿ ಭ್ರಮೆ ಹುಟ್ಟಿಸುವಂಥ ಧೂಮಪಾನ ಮಾಡುವ ಯುವಜನರಿದ್ದಾರೆಂದು ತಿಳಿದದ್ದೇ ನೋಡುಗ ಮುಗುಳುನಗುವುದಷ್ಟೇ ಅಲ್ಲ, ಯುವಜನರನ್ನು ಬಾಧಿಸುತ್ತಿರುವ ಒಂದು ಸಾಮಾಜಿಕ ಪಿಡುಗಿನ ಬಗ್ಗೆ ತನ್ನ ಗಮನ ಹರಿಸುತ್ತಾನೆ.

ಒಂದು ವ್ಯಂಗ್ಯಚಿತ್ರ ರಾಜಕೀಯವಾಗಿರಲಿ ಅಥವಾ ಸಾಮಾಜಿಕವಾಗಿರಲಿ, ಪ್ರಶಂಸಾ ರೂಪದಲ್ಲಿರಲಿ ಅಥವಾ ವಿಮರ್ಶಾತ್ಮಕವಾಗಿರಲಿ, ಅದು ಸಮಾಜದ ಒಂದು ಪ್ರತಿಮೆಯೇ ಹೌದು. ವ್ಯಂಗ್ಯಚಿತ್ರಕಾರನ ಅತಿಶಯೋಕ್ತಿ ಮತ್ತು ಅವನು ಕೊಡುವ ಒತ್ತು ಆ ಪ್ರತಿಮೆ ಧ್ವನಿಸುವ ಸತ್ಯಾಂಶವೊಂದನ್ನು ಹಿಗ್ಗಿಸಿ ತೋರಿಸುವಷ್ಟು ಶಕ್ತವಾದಾಗ ಅದೊಂದು ಅತ್ಯುತ್ತಮ ವ್ಯಂಗ್ಯಚಿತ್ರವಾಗುತ್ತದೆ.

(ಮೂಲ ಲೇಖನ: ಕಳೆದ ಶತಮಾನದ 60ನೆಯ ದಶಕದಲ್ಲಿ ಬೆಂಗಳೂರು ಆಕಾಶವಾಣಿ ಪ್ರಸಾರ ಮಾಡಿದ ಇಂಗ್ಲಿಷ್ ಭಾಷಣ.)